# ನೈಸರ್ಗಿಕ ಫ್ರಿಜ್‌ಗಳು!



■ ಚಿತ್ರ-ಲೇಖನ
ಸ್ವರೂಪನಂದ ಎಂ ಕೊಟ್ಟೂರು

ಇವತ್ತು ಆಧುನಿಕ ತಂತ್ರಜ್ಞಾನ ಎಷ್ಟೇ ಬೆಳೆದಿದ್ದರೂ ರೈತರು ಧಾನ್ಯಗಳನ್ನು ಸಂಗ್ರಹಿಸಿಡಲು ಪಡುವ ಸಂಕಷ್ಟ ದೂರವಾಗಿಲ್ಲ. ಅದೇ ನಮ್ಮ ಪೂರ್ವಜರು ತಂತ್ರಜ್ಞಾನ ಇಷ್ಟೊಂದು ಬೆಳೆದಿಲ್ಲದ ಸಮಯದಲ್ಲಿ ಹೇಗೆ ಧಾನ್ಯ ಸಂಗ್ರಹಗಳನ್ನು ನಡೆಸುತ್ತಿದ್ದರು ಎನ್ನುವುದು ಕುತೂಹಲಕರ. ಅವರ ವಿಧಾನಗಳ ಬಗ್ಗೆ ಅವಲೋಕಿಸಿದಾಗ ಅವರ ತಿಳುವಳಿಕೆಯ ಕುರಿತು ಹೆಮ್ಮೆ ಮೂಡುತ್ತದೆ.

ಧಾನ್ಯ ಸಂಗ್ರಹಕ್ಕಾಗಿ ಈಗ ಗೋದಾಮುಗಳಿವೆ. ಅವು ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಲಭ್ಯ. ಹಾಗಿದ್ದೂ ಸಾಕಷ್ಟು ಪ್ರಮಾಣದ ಧಾನ್ಯ ಇಲಿ–ಹೆಗ್ಗಣಗಳ ಪಾಲಾಗುತ್ತಿರುವುದು ವಾಸ್ತವ. ನಮ್ಮ ಪೂರ್ವಜರು ಈ ಸಂಕಷ್ಟಗಳನ್ನು ಮನಗಂಡು, ತಮ್ಮ ಅನುಭವದ ಮೂಲಕ ಹಲವಾರು ಪರ್ಯಾಯ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಅವುಗಳೇ ಹಗೆವು, ಖರ್ಸಿ, ಹಡೇವು, ಕಣಜ, ಪಡುಗ, ಅಡಕಲಿ, ನೆಲುವು ಮುಂತಾದವು. ಈಗಲೂ ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ಇವುಗಳನ್ನು ಕಾಣಬಹುದಾಗಿದೆ. ಬರಗಾಲದ ಸಂದರ್ಭದಲ್ಲಂತೂ ಇವು ರೈತರ ನಿಜವಾದ ಮಿತ್ರರು.

(8ನೇ ಪುಟ ನೋಡಿ)



ನೆಲುವು